16-12-24

(34)

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉನ್ನತ ಶಿಕ್ಷಣ ಸಚಿವರ ಉತ್ತರ**

**ವಿಷಯ: -**

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಇದರ ಅಡಿಯಲ್ಲಿ ಬರುವ ಸಂಯೋಜಿತ, ಸರ್ಕಾರಿ ಹಾಗೂ ಖಾಸಗಿ ಪದವಿ ಕಾಲೇಜುಗಳು ವಿದ್ಯಾರ್ಥಿಗಳು ಈಗಾಗಲೇ ಪರೀಕ್ಷಾ ಶುಲ್ಕವನ್ನು ಭರ್ತಿ ಮಾಡಿದ್ದರೂ ಸಹ UUCMC ವ್ಯವಸ್ಥೆಯ ಲೋಪದಿಂದಾಗಿ ಪರೀಕ್ಷಾ ಶುಲ್ಕವು ವಿದ್ಯಾರ್ಥಿಗಳ ಖಾತೆಯಿಂದ ಕಡಿತಗೊಂಡಿದ್ದರೂ ಸಹ ವಿಶ್ವವಿದ್ಯಾಲಯಕ್ಕೆ ಸಂದಾಯವಾಗಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಮತ್ತೊಮ್ಮೆ ಅರ್ಜಿ ಮತ್ತು ಶುಲ್ಕವನ್ನು ತುಂಬುವಂತೆ ಸದರಿ ವಿಶ್ವವಿದ್ಯಾಲಯಡಿಯಲ್ಲಿ ಬರುವ ಕಾಲೇಜುಗಳಿಗೆ ತಿಳಿಸುತ್ತಿದ್ದಾರೆ. ಇದರಿಂದಾಗಿ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಡುವೆ ಒತ್ತಡ / ಗೊಂದಲ ನಿರ್ಮಾಣವಾಗಿದೆ, ಹಾಗೂ ಸದರಿ ಸರ್ವರ್‌ನ ಸಮಸ್ಯೆಯಿಂದಾಗಿ ಸುಮಾರು 11 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿರುವುದನ್ನು ಸರ್ಕಾರವು ಗಮನಿಸಬೇಕಾದ ಅಂಶವಾಗಿದೆ.

UUCMC ಸರ್ವರ್ ನಿಂದಾಗಿ ಆಗಿರುವ ಸಮಸ್ಯೆಯನ್ನು ಈ ಕೂಡಲೇ ಬಗೆಹರಿಸಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಿತದೃಷ್ಠಿಯಿಂದ ಈಗಾಗಲೇ ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿ ಮತ್ತು ಶುಲ್ಕವನ್ನು ಪರಿಗಣಿಸಬೇಕೆಂದು ಈ ಮೂಲಕ ಸದನದ ಶೂನ್ಯ ವೇಳೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರವನ್ನು ಒತ್ತಾಯಿಸುತ್ತೇನೆ.

**ಉತ್ತರ:**

UUCMS ತಂತ್ರಾಂಶದಲ್ಲಿ ಗರಿಷ್ಠ 35,000 ಏಕಕಾಲಿನ ಬಳಕೆದಾರಿಗೆ (concurrent User) ಅವಕಾಶವಿರುತ್ತದೆ. ಆದರೆ, ದಿನಾಂಕ 20-11-2024 ರಿಂದ 10-12-2024 ರವರೆಗೆ ಅವಧಿಯಲ್ಲಿ ಬಹುತೇಕ ವಿಶ್ವವಿದ್ಯಾಲಯಗಳು, ಏಕಕಾಲದಲ್ಲಿ ಪರೀಕ್ಷಾ ಶುಲ್ಕ ಭರ್ತಿ ಮಾಡಲು ಪ್ರಾರಂಭಿಸಿದ್ದರಿಂದ, ಏಕಕಾಲಿನ ಬಳಕೆದಾರರ (concurrent User) ಸಂಖ್ಯೆಯು 60,000 ಕ್ಕೆ ಹೆಚ್ಚಾಗಿರುತ್ತದೆ ಮತ್ತು KSDC-Karnataka State Data Center ಯ ಸೇವೆಯಲ್ಲಿರುವ ಉಳಿದ ತಂತ್ರಾಂಶಗಳು ಕಾರ್ಯನಿರ್ವಹಿಸಲು (Onboard) ಮಾಡಿದ್ದರ ಪರಿಣಾಮವಾಗಿ, bandwidth ಕೊರತೆಯ ಕಾರಣದಿಂದ, UUCMS ತಂತ್ರಾಂಶದ ಬಳಕೆದಾರರಿಗೆ slow server ಸಮಸ್ಯೆ ಎದುರಾಗಿರುತ್ತದೆ.

ಸರ್ಕಾರದ ಇತರೆ ತಂತ್ರಾಂಶಗಳಿಗೂ ಆಗುತ್ತಿರುವ slow server ಸಮಸ್ಯೆ ತಡೆಗಟ್ಟಲು, Karnataka State Data Center (KSDC) ರವರು UUCMS ತಂತ್ರಾಂಶಕ್ಕೆ ನೀಡಿದ್ದ ಏಕಕಾಲಿನ ಬಳಕೆದಾರರ ಸಂಖ್ಯೆಯನ್ನು 12,000ಕ್ಕೆ ಇಳಿಸಿದ್ದರ ಪರಿಣಾಮವಾಗಿ ತಂತ್ರಾಂಶದ ಬಳಕೆದಾರರಿಗೆ slow server ಸಮಸ್ಯೆ ಜೊತೆಗೆ, ಶುಲ್ಕ ಪಾವತಿಯಾದ ಬಗ್ಗೆ Server ನಿಂದ ನಿಗದಿತ ಸಮಯದಲ್ಲಿ Response ಸಿಗದೆ, ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ವೈಫಲ್ಯ (payment failure) ಉಂಟಾಗಿದ್ದು, ಹಲವು ವಿದ್ಯಾರ್ಥಿಗಳು ಎರಡು ಬಾರಿ ಶುಲ್ಕ ಪಾವತಿ ಮಾಡಿರುವ ಪ್ರಕರಣಗಳು ಎದುರಾಗಿರುತ್ತವೆ.

ಈ ಕಾರಣದಿಂದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸುತ್ತಿರುವ ಒಟ್ಟು 1,60,000 ವಿದ್ಯಾರ್ಥಿಗಳ ಪೈಕಿ 250 ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಯಲ್ಲಿ ತೊಂದರೆಯಾಗಿರುವುದು ಕಂಡುಬಂದಿರುತ್ತದೆ.

ಸದರಿ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಭಾರತ ಸರ್ಕಾರದ Common Payment Gateway ಆಗಿರುವ, NSDL – PayGov ಹಾಗೂ CSG ತಂಡಗಳೊಂದಿಗೆ ಸಭೆ ನಡೆಸಿ payment status update ಪಡೆದು, ಎರಡು ಬಾರಿ ಶುಲ್ಕ ಪಾವತಿ ಮಾಡಿರುವ ವಿದ್ಯಾರ್ಥಿಗಳ Order Id, ಪಡೆದು ವಿದ್ಯಾರ್ಥಿಗಳಿಗೆ ಮರುಪಾವತಿಯನ್ನು NSDL – PayGov ರವರು ಮಾಡುತ್ತಿದ್ದಾರೆ ಹಾಗೂ ಈ ರೀತಿಯ Double Payment, ಮಾಡಿರುವ ವಿದ್ಯಾರ್ಥಿಗಳ Payment Settlement ವರದಿಯೊಂದಿಗೆ, ಪರೀಕ್ಷಾ ಕುಲಸಚಿವರ ಲಾಗಿನ್‌ನಲ್ಲಿ ಲಭ್ಯವಿರುವ Permit to Student Option ಬಳಸಿಕೊಂಡು ಪರೀಕ್ಷಾ ಅರ್ಜಿ ಪೂರ್ಣಗೊಳಿಸುವ ಮತ್ತು Hall Ticket ನೀಡುವುದರೊಂದಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. Double Payment, ಮಾಡಿರುವ ವಿದ್ಯಾರ್ಥಿಗಳ ಮರುಪಾವತಿ ಬಾಕಿ ಇರುವ ವರದಿ ಪಡೆದು ಅಂತಹ ವಿದ್ಯಾರ್ಥಿಗಳಿಗೆ ಮರುಪಾವತಿಗೆ ಕ್ರಮಕೈಗೊಳ್ಳಲಾಗಿದೆ.

KSDC ಮತ್ತು ಇ-ಆಡಳಿತ ಇಲಾಖೆ ತ್ವರಿತವಾಗಿ ಕ್ರಮಕೈಗೊಂಡಿರುವುದರಿಂದ, ಪ್ರಸ್ತುತ UUCMS ತಂತ್ರಾಂಶದ Server ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ.

ಇಡಿ/ 679/ ಯುಆರ್‌ಸಿ/ 2024

(ಡಾ|| ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು.

3/1/25